<u>ದಿನಾಂಕ**19-09-2025**ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>

<u>**ಪಾಟೀ ಸವಾಲುಃ** ವಾದಿ ಪರ ವಕೀಲರಾದ ಶ್ರೀ **SSC** ರವರಿಂದಃ</u>

ನನ್ನ ತಂದೆ 20 ವರ್ಷಗಳ ಹಿಂದೆ ಮೃತ ಪಟ್ಟಿದ್ದಾರೆ. ನನ್ನ ಅಜ್ಜನ ಹೆಸರು ಫಕ್ಕೀರಪ್ಪ. ಫಕ್ಕೀರಪ್ಪನ ತಂದೆಯ ಹೆಸರು ಬಸಪ್ಪ. ಬಸಪ್ಪನ ಹೆಂಡತಿಯ ಹೆಸರು ಗಂಗವ್ವ. ಅಡಿವೆಪ್ಪ ಈರಪ್ಪ ಕೋಲಕಾರ ನನ್ನ ಸಂಬಂಧಿಕರು. ಫಕ್ಕೀರಪ್ಪ ಫಕೀರ ಕೋಲಕಾರ ನನ್ನ ಸಂಬಂಧಿಕರು. 4 ರಿಂದ 8 ನೇ ಪ್ರತಿವಾದಿಗಳು ಅಡಿವೆಪ್ಪನ ವಾರಸುದಾರರು ಎಂದರೆ ಸರಿ. 9 ಮತ್ತು 10ನೇ ಪ್ರತಿವಾದಿಗಳು ದೇವಪುತ್ರನ ವಾರಸುದಾರರು ಎಂದರೆ ಸರಿ. ದೇವಪುತ್ರನ ತಂದೆ ಫಕ್ಕೀರಪ್ಪ ಎಂದರೆ ಸರಿ.

ಸರ್ವೇ ನಂ.143/1 ಮತ್ತು 143/2 ನನ್ನ ಅಜ್ಜನ ಆಸ್ತಿಗಳು ಎಂದರೆ ಸರಿ. ನಿಪಿ-3 ರಲ್ಲಿ ತೋರಿಸಿರುವ 13 ಗುಂಟೆ ಜಮೀನು ನನ್ನ ಮುತ್ತಜ್ಜ ಬಸಪ್ಪನ ಜಮೀನು. ನಿಪಿ-2 ರಲ್ಲಿ ತೋರಿಸಿರುವ 10 ಗುಂಟೆ ಜಮೀನು 9 ಮತ್ತು 10 ನೇ ಪ್ರತಿವಾದಿಗಳ ಜಮೀನು ಎಂದರೆ ಸರಿ. ನಿಪಿ-1 ರಲ್ಲಿ ತೋರಿಸಿರುವ 16 ಗುಂಟೆ ಜಮೀನು 4 ರಿಂದ 8ನೇ ಪ್ರತಿವಾದಿಗಳ ಜಮೀನು ಎಂದರೆ ಸರಿ.

11 ರಿಂದ 18ನೇ ಪ್ರತಿವಾದಿಗಳು ಕೋಲಕಾರ ಕುಟುಂಬಕ್ಕೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ ಹಾಗೂ ಸದರಿಯವರು ಭಾಗವಾನ್ ಕುಟುಂಬಕ್ಕೆ ಸಂಬಂಧಿಸಿದ್ದಾರೆ ಎಂದರೆ ಸರಿ. ನನ್ನ ಮುತ್ತಜ್ಜ ,ನನ್ನ ಅಜ್ಜ ಮತ್ತು ನನ್ನ ತಂದೆ ಆಸ್ತಿಗಳಿಗೆ ಸಂಬಂಧಪಟ್ಟ ವ್ಯವಹಾರ ಮಾಡಿರುವುದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ.

ನನಗೆ ಈಗ 32 ವರ್ಷ ವಯಸ್ಸು. ನಾನು ಖರೀದಿ ಪತ್ರಗಳನ್ನು ಎಂದಿಗೂ ನೋಡಿಲ್ಲ. ನನ್ನ ಮುತ್ತಜ್ಜ ಬಸಪ್ಪ ಸರ್ವೇ ನಂಬರ 143/3 ರಲ್ಲಿರುವ 13 ಗುಂಟೆ ಆಸ್ತಿಯನ್ನು 1969ರಲ್ಲಿ ಇಮಾಮ್ ಖಾಸಿಮ್ ಗೌಸಸಾಹೇಬ ಭಾಗವಾನ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 2011ರ ವರೆಗೂ ಅಥವಾ ನಂತರದಲ್ಲಿ ನನ್ನ ಕುಟುಂಬದವರು 1969 ರ ಕ್ರಯಪತ್ರವನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ಇನಾಮ್ ಜಮೀನುಗಳು ಎಂದರೆ ಸರಿ. ನನ್ನ ಕುಟುಂಬದವರು ದಾವಾ

ಸ್ವತ್ತುಗಳನ್ನು re-grant ಮಾಡಿಸಿಕೊಂಡಿಲ್ಲ ಎಂದರೆ ಸರಿ. Re-grant ಆಗದ ಕಾರಣ ಭಾಗವಾನ್ ಕುಟುಂಬದವರ ಹೆಸರು ದಾಖಲಾಗಿರುವುದಿಲ್ಲ ಎಂದರೆ ಸರಿ. ಖರೀದಿ ಮಾಡಿದ ನಂತರ ಭಾಗವಾನ್ ಕುಟುಂಬದವರು ದಾವಾ 3ನೇ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಕುಟುಂಬದವರು ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದವರು ಸ್ವಾಧೀನದಲ್ಲಿರುವುದಕ್ಕೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಮಾಡಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ಹಿರೇಬಾಗೇವಾಡಿಯ ಟೋಲ್ ಹತ್ತಿರ ಇರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳ ಬೆಲೆ ಹೆಚ್ಚಾಗಿರುತ್ತದೆ ಎಂದರೆ ಸರಿ. ಖರೀದಿ ಪತ್ರದಲ್ಲಿ ಸ್ವಾಧೀನ ಕೊಟ್ಟಿರುವುದಾಗಿ ಬರೆದಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಬರೆದಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳಿಗೆ ಹೊಂದಿಕೊಂಡಂತೆ ಹೋಟೇಲ್ ಗಳು, ಕಿರಾಣಿ ಅಂಗಡಿಗಳು ಮತ್ತು ಪಂಚರ್ ಶಾಪ್ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿಯೂ ಸಹಾ ಹೋಟೇಲ್‌ಗಳು ಮತ್ತು ಕಿರಾಣಿ ಅಂಗಡಿಗಳು ಇರುತ್ತವೆ ಎಂದರೆ ಸರಿಯಲ್ಲ. ಭಾಗವಾನ್ ಕುಟುಂಬದವರು ತಮ್ಮ ಜೊತೆಗೆ ಹೊಂದಿಕೊಂಡು ಹೋಗುವವರ ಜೊತೆಗೆ ಕೆಲವು ಅಂಗಡಿಗಳನ್ನು ಬಾಡಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ನಾನು ಎಸ್ ಸಿ ಸಮುದಾಯಕ್ಕೆ ಸಂಬಂಧಿಸಿದವನು. ನನ್ನ ಪೂರ್ವಜರು ಸಹ ಅದೇ ಜಾತಿಗೆ ಸೇರಿದವರು. ನಾನು ಮತ್ತು ನನ್ನ ಪೂರ್ವಜರು ಎಸ್ ಸಿ ಸಮುದಾಯಕ್ಕೆ ಸೇರಿರುವುದರಿಂದ ಮಾರಾಟ ಮಾಡಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಸ್ ಸಿ ಮತ್ತು ಎಸ್ ಟಿ ಕಾಯ್ದೆ ಬಂದ ಕಾರಣ ಖರೀದಿಗೆ ಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಾಯ್ದೆ ಬರುವ ಪೂರ್ವದಲ್ಲಿ ನನ್ನ ಪೂರ್ವಿಕರು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

<u>ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.</u>

ಓ ಹೇ ಕೇ ಸ ಇದೆ.

Sd/-

**1 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಬೆಳಗಾವಿ.**

ಒ ಎಸ್ ನಂ:**980/2011**

ಡಿಡಬ್ಲೂ **:2**